ಇದೂ ಇಲ್ಲದೇ ಹೋದರೆ ನಿನ್ನೆ ಸುಮ್ಮನೆ ಏನೂ ಇಲ್ಲದೆ ಒಂದು ಕೋಟಿ ರೂಪಾಯಿ ಹಾಳು ಮಾಡಿದ್ದೇವೆ. ಈ ರಾಜ್ಯದ ಮಣ್ಣಿನ ಮಕ್ಕಳ ತೆರಿಗೆಯ ಹಣವನ್ನು ಹಾಳು ಮಾಡಿದ್ದೇವೆ. ಇದಕ್ಕೆ ಯಾರೂ ಜವಾಬ್ದಾರರೂ ಇವತ್ತು ಏಕ್‌ದಂ ಸದನ ಏಕೆ ಚಾಲೂ ಆಯಿತು? ನಿನ್ನೆಯೇ ಇದನ್ನು ಮಾಡಿದ್ದರೆ?

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಈಗ ಸದನ ಸರಿಯಾಗಿ ನಡೆಯಬಾರದು ಎಂದು ಇವರ ಅಭಿಪ್ರಾಯವಾ ಹೇಳಿ. ನಿನ್ನೆ ಹಾಗೆಯೇ ಇವತ್ತು ಆಗಬೇಕೆಂದು ನೀವು ಬಯಸುತ್ತೀರಾ? ಅದು ನಿಮ್ಮ ಭಾವನೆಯೇ?

ಅಧ್ಯಕ್ಷರು : ನಾನು ಅದಕ್ಕೆ ಉತ್ತರ ಹೇಳುತ್ತೇನೆ. ಮಾನ್ಯ ಸಭಾಪತಿಯವರೆ, ತಾವು ಕುಳಿತುಕೊಳ್ಳಿ. ರೂಲ್ಸ್ ಕಮಿಟಿ ಹೊಸದಾಗಿ ಆಗಿದೆ. ನಮ್ಮ ರೂಲ್ಸ್‌ನಲ್ಲಿ ಏನೇನು ಇದೆ ಅದರ ಅಮೆಂಡ್‌ಮೆಂಟ್ಸ್ ಬಗ್ಗೆ ನಾವೊಂದು ಕಮಿಟಿ ಮಾಡಿದ್ದೇವೆ. ಕಮಿಟಿಯ ಮೊದಲನೇ ಸಭೆ ನಡೆದಿದೆ. ಎರಡನೇ ಸಭೆ, ಮೂರನೆಯ ಸಭೆ, ನಾಲ್ಕನೆಯ ಸಭೆಗಳಲ್ಲಿ ಈ ರೂಲ್ಸನ್ನು ನಾವು ಛೇಂಜ್ ಮಾಡೋಣ. ಆಗ ಅದನ್ನು ಇನ್‌ಕಾರ್ಪೊರೇಟ್ ಮಾಡಿ ಆ ರೂಲ್ಸ್ ಕಮಿಟಿಯವರು ಏನು ಮಾಡುತ್ತಾರೋ ನೋಡೋಣ. ರೂಲ್ಸ್ ಕಮಿಟಿಯಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆ. ಆ ರೂಲ್ಸ್ ಕಮಿಟಿಯವರು ಏನು ಮಾಡುತ್ತಾರೆ ಅದರ ಪ್ರಕಾರ ಮುಂದುವರಿಸುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸಾರ್ ಒಂದು ಸಬ್‌ಮಿಷನ್ ಇದೆ.

ಅಧ್ಯಕ್ಷರು : ಈಗ ಬೇಡ, ಒಬ್ಬರು ಮಾತನಾಡಿದರೆ ಎಲ್ಲರೂ ಅವಕಾಶ ಕೇಳುತ್ತಾರೆ.

7. ಶಾಸನ ರಚನೆ:

2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ

ಅ. ಪರ್ಯಾಲೋಚನಾ ಪ್ರಸ್ತಾಪ

+ **ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಇಲಾಖಾ ಸಚಿವರು) :** ಮಾನ್ಯ ಅಧ್ಯಕ್ಷರೆ, "ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನ ಬೇಕೆಂದು ಕೋರುತ್ತೇನೆ."

ಪ್ರಸ್ತಾವನೆ ಮಂಡಿಸಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನಿಗೆ ಹಿಂದಿನ ಸಿಟಿ ಇಂಪ್ರೂಮೆಂಟ್‌ಟ್ರಸ್ಟ್ ಬೋರ್ಡ್ ಆಕ್ಟ್‌ಗೆ ತಿದ್ದುಪಡಿ, ಮಾಡತಕ್ಕ, ಮಸೂದೆ. ಇದರ ಉದ್ದೇಶ ಏನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಮಾಡಿದಂತಹ ಪ್ರದೇಶದಲ್ಲಿ ಅದಕ್ಕೆ ಬೇಕಾದಂತಹ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಕೋಡತಕ್ಕಂಥ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಆ ಕಾರಣಕ್ಕಾಗಿ ಆ ಪ್ರದೇಶದ ಜಮೀನು ಮತ್ತು ಮನೆಗಳ ಮೇಲೆ ಕಂದಾಯ ಮತ್ತು ಸೆಸ್ ವಗೈರೆ ತೆರಿಗೆಗಳನ್ನು ಹಾಕತಕ್ಕ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಕ್ರಮ ಸರಿ ಅಲ್ಲ ಎಂದು ಹೇಳಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ ಹಿನ್ನೆಲೆಯಲ್ಲಿ ಪ್ರಾಧಿಕಾರಕ್ಕೆ ತೆರಿಗೆ ಹಾಕತಕ್ಕಂಥ ಅಧಿಕಾರ ಇಲ್ಲ ಎಂದು ಹೇಳಿ ಒಂದು

ತೀರ್ಮಾನ ಆಯಿತು. ಇದರಿಂದ ಮುಕ್ತಿ ಪಡೆಯುವುದಕ್ಕೋಸ್ಕರವಾಗಿ ಹಿಂದೆ ಪ್ರಾಧಿಕಾರದ ಸೆಕ್ಷನ್ 28ಕ್ಕೆ ತಿದ್ದುಪಡಿಯನ್ನು ಮಾಡಲಾಗಿ ಆ ತೆರಿಗೆ ಹಾಕತಕ್ಕಂಥ ಅಧಿಕಾರವನ್ನು ಸಂಪಾದನೆ ಮಾಡಿಕೊಂಡಿದ್ದೇವೆ. ಪ್ರಾಧಿಕಾರಕ್ಕೆ ತಿದ್ದುಪಡಿ ತಂದು ಈ ರೀತಿಯಾದಂತಹ ಒಂದು ತೆರಿಗೆ ಹಾಕತಕ್ಕ ಕ್ರಮ ಏನು ಇತ್ತು, ಅದನ್ನು ವ್ಯಾಲಿಡೇಟ್ ಮಾಡಿಕೊಳ್ಳುವುದಕ್ಕೆ ಅಧಿಕಾರವನ್ನು ಪಡೆದುಕೊಂಡಿದ್ದೇವೆ. ಅದರಿಂದ ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಮತ್ತೆ ಪ್ರಶ್ನೆ ಮಾಡಿದರು. ಈ ರೀತಿಯ ತಿದ್ದುಪಡಿ ಮಾಡಿರತಕ್ಕ ಕಾನೂನು ಸಿಂಧು ಅಲ್ಲ, ಇದನ್ನು ಕಿತ್ತು ಹಾಕಬೇಕೆಂದು ಪ್ರಶ್ನೆ ಮಾಡಿದರು. ಆದರೆ ಸುಪ್ರೀಂ ಕೋರ್ಟ್ ಒಂದು ತೀರ್ಮಾನ ಮಾಡಿತು. ಆ ತಿದ್ದುಪಡಿ ಮಾಡಿದ ತಾರೀಖಿನ ನಂತರ ತೆರಿಗೆಯನ್ನು ಹಾಕತಕ್ಕ ಅಧಿಕಾರ ಸಿಂಧು ಅಲ್ಲ ಎನ್ನತಕ್ಕ ತೀರ್ಮಾನ ಮಾಡಿದರು. ಆದರಿಂದ ಈಗ ನಾವು ಅನಿವಾರ್ಯವಾಗಿ ಕೆಲವು ತಿದ್ದುಪಡಿಗಳನ್ನು ತರಬೇಕಾಯಿತು. ಹಿಂದೆ ಬೆಂಗಳೂರು ಅಭಿವೃದ್ಧಿ, ಪ್ರಾಧಿಕಾರ ಸುಮಾರು 17 ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಹಣವನ್ನು ತೆರಿಗೆ ಮುಖಾಂತರ ಸಂಗ್ರಹ ಮಾಡಿದರು. ಅದೇ ಕಾಲಕ್ಕೆ ಆ ಪ್ರದೇಶದ ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು ಆಗಿರಬಹುದು, ರಸ್ತೆ ಆಗಿರಬಹುದು. ಬೀದಿ ದೀಪ ಆಗಿರಬಹುದು. ಈ ರೀತಿಯಾದಂತಹ ಎಲ್ಲಾ ನಾಗರೀಕ ಸವಲತ್ತನ್ನು ಕೊಟ್ಟು ಆ ಪ್ರಕಾರವಾಗಿಯೇ ತೆರಿಗೆಯನ್ನು ವಸೂಲು ಮಾಡಿದ್ದೇವೆ. ಈಗ ಈ ತಿದ್ದುಪಡಿಯನ್ನು ನಾವು ತಾರದೇ ಹೋದರೆ ಹಿಂದೆ ವಸೂಲು ಮಾಡಿರತಕ್ಕದ್ದನ್ನು ವ್ಯಾಲಿಡೇಟ್ ಮಾಡತಕ್ಕಂಥ ಒಂದು ಮಸೂದೆಯನ್ನು ನಾವು ತಂದುಕೊಳ್ಳದೇ ಹೋದರೆ ನಾಳೆ ತೆರಿಗೆ ಕೊಟ್ಟವರು ನಮಗೆ ವಾಪಸ್ ಕೊಡಬೇಕೆಂದು ಕೇಳಿದರೆ ಅದನ್ನು ನಾವು ಪಾವತಿ ಮಾಡಬೇಕಾದಂತಹ ಸಂದರ್ಭ ಬರುತ್ತದೆ. ಏಕೆಂದರೆ ಆ ಎಲ್ಲಾ ಪ್ರದೇಶದಲ್ಲಿ ಹಣ ಖರ್ಚು ಮಾಡಿ, ಎಲ್ಲಾ ನಾಗರೀಕ ಸೌಲಭ್ಯಗಳನ್ನು ಪ್ರಾಧಿಕಾರ ಕೊಟ್ಟಿದೆ. ಆದ್ದರಿಂದ ಆ ಕಾರಣಕ್ಕಾಗಿಯೇ; ಅಲ್ಲಿ ತೆರಿಗೆಯನ್ನು ವಸೂಲು ಮಾಡಿರತಕ್ಕಂಥದ್ದು. ಆದ್ದರಿಂದ ಈ ಪ್ರಾಧಿಕಾರದ ಕಾನೂನಿಗೆ ಒಂದು ತಿದ್ದುಪಡಿ ಮಾಡತಕ್ಕಂಥದ್ದು ಹಾಗೆನೇ ಹಿಂದಿನ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಆಕ್ಟ್ ಆಫ್ 1945 ಇತ್ತಲ್ಲಾ, ಇದರ 20ಎ, 20ಬಿ, 20 ಸಿ ಎಂದು ತೆಗೆದುಕೊಂಡು ಈ ಒದು ಪುರಸಭೆಗಳಿಗೆ ಇರಬೇಕಾದಂತಹ ಅಧಿಕಾರವನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಆ ಅಧಿಕಾರದ ಬಲದಿಂದ ತೆರಿಗೆಯನ್ನು ಹಾಕುವುದಕ್ಕೆ ಬೇಕಾದಂತಹ ಅಧಿಕಾರವನ್ನು ಪಡೆಯುವುದಕ್ಕೆ ಈ ಒಂದು ತಿದ್ದುಪಡಿಯನ್ನು ತರಬೇಕಾಗಿದೆ. ಅನಿವಾರ್ಯ ಪ್ರಸಂಗದಿಂದ ನಾವು ತಿದ್ದುಪಡಿ ತರಬೇಕಾಯಿತು. ಏಕೆಂದರೆ ತೆರಿಗೆ ಕೊಟ್ಟವರು ಮತ್ತೆ ವಾಪಸ್ ಕೇಳಿದರೆ ಕೊಡಬೇಕಾಗುತ್ತದೆ. ನಾವು ಹಣ ಖರ್ಚು ಮಾಡಿದ್ದೇವೆ, ಸವಲತ್ತನ್ನೂ ಒದಗಿಸಿಕೊಟ್ಟಿದ್ದೇವೆ. ಆ ಕಾರಣ ತೆರಿಗೆದಾರರು ಕೊಟ್ಟಂತಹ ಹಣ ಏನು ಇದೆ, ಅದನ್ನು ನಾವು ಬೇರೆ ಕಾರಣಗಳಿಗಾಗಿ ಬಳಸಿಕೊಂಡಿಲ್ಲ. ಆ ಪ್ರದೇಶದ ಅಭಿವೃದ್ಧಿಗೋಸ್ಕರವೇ ನಾವು ಬಳಸಿಕೊಂಡಿದ್ದೇವೆ. ಆದ್ದರಿಂದ ಮತ್ತೆ ಕೇಳಿದರೆ ವಾಪಸ್ ಕೊಡುವುದಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ದಯಮಾಡಿ ಇದಕ್ಕೆ ಒಪ್ಪಿಗೆಯನ್ನು ನೀಡಬೇಕೆಂದು ಕೋರುತ್ತೇನೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ

ಸದನದಲ್ಲಿ ಮಾತನಾಡುವುದಕ್ಕೆ ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರಿಗೆ ತೊಂದರೆ ಕೊಡುತ್ತಿರುವ ಬಗ್ಗೆ.